**ಪಿ.ಡಬ್ಲೂ.1**

ದಿನಾಂಕಃ 11.10.2023 ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಭೋಧಿಸಲಾಯಿತು.

ಮುಖ್ಯ ವಿಚಾರಣೆ ವಾದಿ ಪರ ಶ್ರೀ ಆರ್.ಡಿ. ವಕೀಲರಿಂದ

ನಾನು ಈ ದಾವೆಯ ವಾದಿಯಾಗಿರುತ್ತೇನೆ. ನನ್ನ ಮುಂದುವರೆದ ಮುಖ್ಯ ವಿಚಾರಣಾ ಪ್ರಮಾಣ ಪತ್ರವನ್ನು ಸಲ್ಲಿಸಿದ್ದೇನೆ. ಸದರಿ ಪ್ರಮಾಣ ಪತ್ರಿಕೆಯಲ್ಲಿ ಹೇಳಿರುವ ಅಂಶಗಳನ್ನು ನಾನೇ ಹೇಳಿ ಬರೆಯಿಸಿದ್ದೇನೆ ಹಾಗೂ ಅವು ಸತ್ಯವಾಗಿರುತ್ತವೆಂದು ಪ್ರಮಾಣೀಕರಿಸುತ್ತೇನೆ. ಸದರಿ ಪ್ರಮಾಣ ಪತ್ರಿಕೆಯಲ್ಲಿ ಅಂಶಗಳನ್ನು ಓದಿ ತಿಳಿದುಕೊಂಡು ಸಹಿ ಮಾಡಿರುತ್ತೇನೆ.

ವಂಶವೃಕ್ಷವನ್ನು ನಿಪಿ-1 ಎಂದು, ಸ.ನಂ. 42 ರ ಗಣಕೀಕೃತ ಪಹಣಿಯನ್ನು ನಿಪಿ-2 ಎಂದು, ಸ.ನಂ. 101/1 ರ ಗಣಕೀಕೃತ ಪಹಣಿಯನ್ನು ನಿಪಿ-3 ಎಂದು, ಸ.ನಂ. 103/1 ರ ಗಣಕೀಕೃತ ಪಹಣಿಯನ್ನು ನಿಪಿ-4 ಎಂದು, ದಾವಾ ತಪಶೀಲು ಆಸ್ತಿ ಸಂ.4 ಕ್ಕೆ ಸಂಬಂಧಿಸಿದ ಡಿಮಾಂಡ್ ರೆಜಿಸ್ಟರ್ ಪ್ರತಿಯ ದೃಢೀಕೃತ ನಕಲು ಪ್ರತಿಯನ್ನು ನಿಪಿ-5 ಎಂದು, ಎಂ.ಆರ್.ಹೆಚ್. 28/2017-18 ರ 2 ಪುಟದ ಮುಟೇಶನ ಪ್ರತಿಯನ್ನು ನಿಪಿ-6 ಎಂದು, ನನ್ನ ಮಾವನ ಮರಣ ಪ್ರಮಾಣ ಪತ್ರವನ್ನು ನಿಪಿ-7 ಎಂದು, ನನ್ನ ಅತ್ತೆಯ ಮರಣ ಪ್ರಮಾಣ ಪತ್ರವನ್ನು ನಿಪಿ-8 ಎಂದು, ನನ್ನ ಯಜಮಾನರ ಮರಣ ಪ್ರಮಾಣ ಪತ್ರವನ್ನು ನಿಪಿ-9 ಎಂದು ಗುರುತಿಸಲಾಯಿತು.

(ವಾದಿ ಪರ ವಕೀಲರು ಮುಂದುವರೆದ ಮುಖ್ಯ ವಿಚಾರಣೆಗೆ ಸಮಯವನ್ನು ಕೋರಿದ್ದು ಸಮಯವನ್ನು ನೀಡಲಾಯಿತು.)

ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು.

ಓ.ಹೇ.ಕೇ.ಸರಿ ಇದೆ.

ಪ್ರಧಾನ ಸಿವಿಲ್ ಮತ್ತು ಜೆ.ಎಂ.ಎಫ್.ಸಿ,
ನ್ಯಾಯಾಧೀಶರು, ಹುಣಸೂರು.